ನಿಶ್ಶಬ್ದವಾಗಿ ಆದರೆ ಎಷ್ಟು ಪರಿಪೂರ್ಣವಾಗಿ ಆಗಬಹುದು ಅನ್ನೋದಕ್ಕೆ 'ಕಲ್ಲು ಕರಗುವ ಸಮಯ'ದ ಶ್ಯಾಮಲೆ ನನಗೊಂದು ಉದಾಹರಣೆಯಾಗಿ ಕಾಣಿಸುತ್ತಾಳೆ. ಶಾಂತಿನಾಥ ದೇಸಾಯಿ ಕೂಡಾ ನನ್ನ ಫೇವರಿಟ್ ಲೇಖಕರು. ಯಾಕೆ ಅಂತಂದ್ರೆ ಹೆಣ್ಣನ್ನು ಬಹಳ ನಿಜದಲ್ಲಿ ಚಿತ್ರಿಸುವುದಕ್ಕೆ ಪ್ರಯತ್ನಿಸಿದವರು ಅವರು. ಗಂಡಿಗೆ ನೂರು ಕವಚಗಳಿವೆ ಈ ವ್ಯವಸ್ಥೆಯಲ್ಲಿ, ಆದರೆ ಹೆಣ್ಣಿಗೆ ಕವಚಗಳಿಲ್ಲ. ಕವಚಗಳಿಲ್ಲದ ಹೆಣ್ಣು ಹೇಗೆ ತೊಂದರೆಗೆ ಒಳಗಾಗುತ್ತಾಳೆ, ಆದ್ರೆ ಕವಚಗಳಿರುವ ಗಂಡಿಗಿಂತ ಹೆಚ್ಚು ಬದುಕಿನ ಮೇಲೆ ಪ್ರೀತಿ ಹೆಣ್ಣಿಗಿದೆ ಅನ್ನುವುದನ್ನು ದೇಸಾಯಿ ಚಿತ್ರಿಸ್ತಾರೆ. ನಮ್ಮ ನಮ್ಮ ಮನೋವಿನ್ಯಾಸಗಳಿಂದ ಗಂಡು ಹೆಣ್ಣು ಇಬ್ಬರೂ ಮುಕ್ತಿ ಪಡೀಬೇಕು ಅನ್ನೋದನ್ನ ದೇಸಾಯಿಯವರಷ್ಟು ಉತ್ಕಟವಾಗಿ ಹೇಳಿರೋ ಲೇಖಕರು ಕಡಿಮೆ ನಮ್ಮಲ್ಲಿ. ಹಾಗೆಯೇ ನನಗೆ ಪ್ರಿಯವಾದ ಇನ್ನೊಂದು ಮಾದರಿ ಅಗ್ರಹಾರ ಕೃಷ್ಣಮೂರ್ತಿಯವರ 'ನೀರು ಮತ್ತು ಪ್ರೀತಿ' ಕಾದಂಬರಿಯ ಜಲಜ. ನೀರಿನ ಧಾರಣಶಕ್ತಿ ಹಾಗೂ ಹೆಣ್ಣಿನ ಧಾರಣಶಕ್ತಿಯ ಜೀವಂತ ಪ್ರತಿಮೆಯಂತೆ ನನಗೆ ಇವಳು ಕಾಣಿಸುತ್ತಾಳೆ.

◆ **ಪ್ರೀತಿ ಮತ್ತು ಪ್ರತಿರೋಧದ ಅನನ್ಯ ಮಾದರಿಗಳಾದ ಮೀರಾ, ಅಕ್ಕಮಹಾದೇವಿ, ಲಲ್ಲಾದೇವಿ, ಆಂಡಾಳ್ ತರದವರನ್ನು ಭಕ್ತಿಯ ಜೊತೆಗಷ್ಟೇ ಬೆಸೆದು ತಮಗೆ ಬೇಕಾದ ಚೌಕಟ್ಟಿನಲ್ಲಿ ಕೂರಿಸುವ ಕೆಲಸವನ್ನು ಪಿತೃಸಂಸ್ಕೃತಿ ಮಾಡಿತಲ್ವಾ?**

ಹಾಗೆ ಮಾಡುವುದು ಪಿತೃಸಂಸ್ಕೃತಿಯ ಒಂದು ಮಾದರಿ ಅನ್ನೋದ್ರಲ್ಲಿ ಯಾವ ಅನುಮಾನವೂ ಇಲ್ಲ. ಜೊತೆಗೆ ಅದು ನಮ್ಮ ಕಾವ್ಯ ಮೀಮಾಂಸೆಯ ಮಿತಿಯೂ ಹೌದು. ನಮ್ಮ ಇಡೀ ಸಾಮಾಜಿಕ, ಸಾಂಸ್ಕೃತಿಕ ರಚನೆಗಳ ಮಿತಿಯೂ ಹೌದು ಅದು ಅಂತಾನೂ ಅನಿಸತ್ತೆ ನನಗೆ. ಸ್ತ್ರೀವಾದವು ಇಂಥದ್ದನ್ನು ಮೀರಿಕೊಳ್ಳುವ ಕಡೆಗಿನ ಚಲನೆಯೇ ಆಗಿದೆ.

◆ **ಕನ್ನಡದ ಅನನ್ಯ ಲೇಖಕಿಯರಾದ ಮತ್ತು ನಿಮಗೆ ಪ್ರಿಯರಾದ ಎಂ.ಕೆ. ಇಂದಿರಾ ಮತ್ತು ವೀಣಾ ಶಾಂತೇಶ್ವರ ಇಬ್ಬರಲ್ಲೂ ಬರಹ ಬದುಕಿನ ಒಂದು ಹಂತದ ನಂತರ ಹೆಣ್ಣಿನ ಕುರಿತಾದ ತಮ್ಮ ದೃಷ್ಟಿಕೋನ ಪಿತೃಸಂಸ್ಕೃತಿಗೆ ಬದ್ಧವಾಗಿರುವುದನ್ನು ನೋಡತೀವಿ. ಇಂಥ ಯುಟರ್ನ್‌ಗಳು ನನಗಂತೂ ಬಹಳ ಶಾಕಿಂಗ್.**

ಬರೀ ವ್ಯಕ್ತಿಗತ ನೆಲೆಯಲ್ಲಿ ಇದನ್ನು ನೋಡೋದನ್ನು ನಾನಂತೂ ಒಪ್ಪಲ್ಲ. ಏಕೆ ಅಂತಂದ್ರೆ, ಇವಾಗ ವೀಣಾ ಅವರ 'ತಿರುಗಿ ಹೋದಳು' ಕತೆಯಲ್ಲಿ ನಾವು ಅವರು ಯುಟರ್ನ್ ತಗೊಂಡ್ರು ಅಂತ ಹೇಳ್ತಾ ಇದೀವಿ. 'ಗಂಡಸರು', 'ಕೊನೆಯ ದಾರಿ', 'ಬಿಡುಗಡೆ' ಬರೆದವರು ಇಂಥ ಕತೆಯನ್ನು ಬರೀತಾರೆ ಅನ್ನೋದು, 'ಫಣಿಯಮ್ಮ' ಬರೆದ ಎಂ.ಕೆ. ಇಂದಿರಾ 'ಪೂರ್ವಾಪರ' ಬರೀತಾರೆ ಅನ್ನೋದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಜೀವನ ಅವರನ್ನ ಹೈರಾಣ ಮಾಡಿದ್ಯೋ, ಆ ದಾರಿ ನಮ್ಮನ್ನ ದಡ ಮುಟ್ಟಿಸೋದಿಲ್ಲ ಅಂತ ಅನಿಸಿದ್ಯೋ? ಕೊನೆಗೂ ಒಂದು ಸೇಫ್ ಜೋನ್ ಹುಡುಕುವ ಒಂದು ಅನಿವಾರ್ಯತೆಗೆ ಹೆಣ್ಣುಮಕ್ಕಳನ್ನು ಈ ವ್ಯವಸ್ಥೆ ನೂಕುತ್ತೆ ಅನ್ನೋದನ್ನು ಹೇಳ್ತಿದ್ರಾ? ಎಲ್ಲೋ ಒಂದು ಕಡೆ ಅವರು ಕೈಚೆಲ್ಲಿಬಿಟ್ಟರು, ಇನ್ನು ನನಗೆ ಆಗಲ್ಲ, ಸಾಕು, ಎಷ್ಟು ಮಾಡಿದ್ರು ಇದು ಬದಲಾಗಲ್ಲ. ನನಗಿಂತ ಮೊದಲೇ ಬದಲಾದ ಬಂಡೆಯ ಕಂಡೆ ಅನ್ನುವ ಸ್ಥಿತಿಗೆ ನಾವು ಹೆಣ್ಣುಮಕ್ಕಳೇ ಬರತೀವೋ ಅಥವಾ ಆ ಸ್ಥಿತಿಗೆ, ಆ ನಿಲುವಿಗೆ ನಮ್ಮನ್ನು ತಳ್ಳಲಾಗುತ್ತೋ? ಈ ಎರಡನ್ನೂ ಬೇರೆ ಬೇರೆ ಮಾಡೋದು ತುಂಬಾ ಕಷ್ಟ. ಮೇಲ್ನೋಟಕ್ಕೆ ನಮಗೆ ಅದು ವೈಯಕ್ತಿಕವಾದ ನಿಲುವು ಅಂತ ಅನ್ನಿಸಿಬಿಡುತ್ತೆ. ಆದರೆ ಒಳಗೇ ಹೆಣ್ಣನ್ನು ಒಂದು ಮೂಕ ಅಮೈತ್ರಿಯಲ್ಲಿ, ಕಿಚ್ಚಿಲ್ಲದ ಬೇಗೆಯಲ್ಲಿ ಹಣ್ಣು ಮಾಡುವ, ತನಗೆ ಹೇಗೆ ಬೇಕೋ ಹಾಗೆ ಪಳಗಿಸುವ ನೂರು ಹುನ್ನಾರಗಳನ್ನು ಈ ವ್ಯವಸ್ಥೆ ಮಾಡ್ಕಂಡಿರುತ್ತೆ. ಇನ್ನೇನು